**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1220/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಕಿಶೋರ್ ಪಿ | ಪ್ರಾಸಾ-3 |
| ತಂದೆಯ ಹೆಸರು | : ಪುಟ್ಟ ಚನ್ನಪ್ಪ | ಚಾಸಾ-15 |
| ವಯಸ್ಸು | : 32 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ | ದಿನಾಂಕಃ 06.03.2026. |
| ವಾಸಸ್ಥಳ | : ಬೆಳ್ತಂಗಡಿ ಸಂಚಾರ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆ: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನಾನು ದಿ.03.03.203 ರಿಂದ ದಿ.11.07.2024 ರವರೆಗೂ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.27.05.2024 ರಂದು ಪ್ರಕರಣದ ತನಿಖಾ ಕಡತವನ್ನು ಚಾಸಾ-14 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ, ಪ್ರಕರಣದ ಕೃತ್ಯ ನಡೆದ ಸ್ಥಳದ ಮಹಜರ್ ನ್ನು ಕೈಗೊಳ್ಳಲು ಚಾಸಾ-12 ರವರನ್ನು ಕರೆದುಕೊಂಡು ಇಲಾಖಾ ಜೀಪಾದ KA-18-G-0894 ವಾಹನದಲ್ಲಿ ಸಂಚರಿಸುತ್ತಾ, ಅಲ್ಲೆ ಹಾಜರಿ ಸಿಕ್ಕ ಚಾಸಾ-2 ಮತ್ತು 3 ರವರಿಗೆ ಪರಕಣದ ಬಗ್ಗೆ ತಿಳಿಸಿ ಅವರಿಗೆ ಪಂಚರಾಗಿ ಹಾಜರಾಗುವಂತೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ನಂತರ ಚಾಸಾ-1 ರವರು ಸ್ಥಳವನ್ನು ತೋರಿಸಿದ ಮೇರೆಗೆ ಸ.16.00 ರಿಂದ 17.00 ಗಂಟೆಯವರೆಗೂ ಚಾಸಾ-2 ಮತ್ತು 3 ರವರ ಸಮಕ್ಷಮ ಮಹಜರ್ ನ್ನು ಬರವಣಿಗೆ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಕಬ್ಬಿಣದ ಬೀಗವನ್ನು ಅಮಾನತುಪಡಿಸಿಕೊಂಡು ಠಾಣಾ ಮಾಲು ಪಟ್ಟಿ ಸಂ.93/2024 ರಲ್ಲಿ ನಮೂದಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದನೆ ಮಾಡಿಕೊಂಡಿರುತ್ತೇನೆ. ದಿ.28.05.2024 ರಂದು ಆರೋಪಿಯ ಪತ್ತೆಗಾಗಿ ಚಾಸಾ-10 ಮತ್ತು 12 ರವರನ್ನು ನೇಮಕ ಮಾಡಿರುತ್ತೇನೆ. ನಂತರ ಅನುಮಾನಾಸ್ಪದ ವ್ಯಕ್ತಿಗಳ ಬಗ್ಗೆ ಚಾಸಾ-1 ರವರನ್ನು ಕೇಳಲಾಗಿ ಸದರಿಯವರು ಸಂದೀಪ್ ಬಿನ್ ಸಂಜೀವ್, 30 ವರ್ಷ ಅವರ ಬಗ್ಗೆ ಅನುಮಾನವಿದೆ ಎಂದು ತಿಳಿಸಿರುತ್ತಾರೆ. ನಂತರ ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ ಆತನನ್ನು ಠಾಣೆಗೆ ಕರೆದುಕೊಂಡು ಬಂದು ವಿಚಾರಿಸಲಾಗಿ ಸದರಿ ವ್ಯಕ್ತಿಯು ಮನೆ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡಿರುತ್ತಾರೆ. ನಂತರ ಸದರಿ ವ್ಯಕ್ತಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ಸದರಿ ಸ್ವ ಇಚ್ಛಾ ಹೇಳಿಕೆಯಲ್ಲಿ ಆರೋಪಿಯು ಕೃತ್ಯ ಕಳಸಿದ ಕಬ್ಬಿಣದ ರಾಡನ್ನು ತೋರಿಸುವುದಾಗಿ ತಿಳಿಸಿರುತ್ತಾನೆ. ನಂತರ ಚಾಸಾ-10 ಮತ್ತು 12 ರವರ ಬೆಂಗಾವಲಿನಲ್ಲಿ ಇಲಾಖಾ ಜೀಪ್ ನಲ್ಲಿ ಕರೆದುಕೊಂಡು ಚಾಸಾ-4 ಮತ್ತು 5 ರವರಿಗೆ ಪ್ರಕರಣದ ಮಾಹಿತಿಯನ್ನು ತಿಳಿಸಿ, ಸದರಿಯವರ ಸಮಕ್ಷಮ ಆರೋಪಿಯು ತೋರಿಸಿದ ಕಬ್ಬಿಣದ ರಾಡನ್ನು ವಶಪಡಿಸಿಕೊಂಡಿರುತ್ತೇನೆ. ನಂತರ ಕಳ್ಳತನ ಮಾಡಿದ ಚಿನ್ನ ಮತ್ತು ಹಣದ ಬಗ್ಗೆ ಕೇಳಲಾಗಿ ಕೃತ್ಯ ನಡೆದ ಸ್ಥಳದಿಂದ 400 ಮೀಟರ್ ದೂರದಿಂದ ಶರತ್ ಗೌಡ ರವರ ವಾಸದ ಮನೆಯ ಹಿಂಬದಿಯ ಕೂಲಿ ಲೈನ್ ಮನೆಯಲ್ಲಿ ರೂ.500/- ರ ಮುಖಬೆಲೆಯ ಇಪ್ಪತ್ತು ಸಾವಿರದ 40 ನೋಟುಗಳನ್ನು

ಮತ್ತು ಒಂದು ಜೊತೆ ಚಿನ್ನದ ಕಿವಿ ಓಲೆಯನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ನ್ನು 15.00 ರಿಂದ 16.00 ಗಂಟೆಯವರೆಗೂ ಬರವಣಿಗೆ ಮಾಡಿರುತ್ತೇನೆ. ನಂತರ ಸದರಿ ಸ್ವತ್ತುಗಳನ್ನು ಠಾಣಾ ಮಾಲು ಪಟ್ಟಿ ಸಂ.94/2024 ರಡಿಯಲ್ಲಿ ನಮೂದಿಸಿ ಮಾನ್ಯ ಘನ ನ್ಯಾಯಾಲಯದ ಪೂರ್ವಾನುಮತಿಗೆ ಕೋರಿಕೊಂಡಿರುತ್ತೇನೆ. ನಂತರ ಆರೋಪಿಯನ್ನು ಚಾಸಾ-10 ಮತ್ತು ಠಾಣಾ ಸಿಬ್ಬಂದಿ ದಯಾನಂದ್ ರವರೊಟ್ಟಿಗೆ ವೈದ್ಯಕೀಯ ಪರೀಕ್ಷೆಗೆ ಕಳುಹಿಸಿರುತ್ತೇನೆ.

ಆರೋಪಿಯು ತನಿಖೆಯ ಅವಶ್ಯಕತೆಗೆ ಇಲ್ಲದ ಕಾರಣ ದಸ್ತಗಿರಿ ಕ್ರಮವನ್ನು ಅನುಸರಿಸಿ ಮಾನ್ಯ ಘನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಆರೋಪಿಗೆ ನ್ಯಾಯಾಂಗ ಬಂಧನವನ್ನು ಆದೇಶಿಸಿದ್ದು, ಆರೋಪಿಯನ್ನು ಚಾಸಾ-10 ರವರೊಟ್ಟಿಗೆ ಚಿಕ್ಕಮಗಳೂರಿನ ಕಾರಾಗೃಹಕ್ಕೆ ಕಳುಹಿಸಲಾಗಿರುತ್ತದೆ. ನಂತರ ತನಿಖೆಯನ್ನು ಮುಂದುವರೆಸಿ ದಿ.29.05.2024 ರಂದು ಅಮಾನತುಪಡಿಸಿಕೊಂಡ ಒಂದು ಜೊತೆ ಕಿವಿ ಓಲೆ ಯನ್ನು ಚಾಸಾ-6 ರವರ ಸಮಕ್ಷಮ ಚಾಸಾ-7 ಮತ್ತು 8 ರವರ ಸಮಕ್ಷಮ ದಲ್ಲಿ ಪರೀಕ್ಷಿಸಲಾಗಿರುತ್ತದೆ. ಸದರಿ ಮಹಜರ್ ನ್ನು 13.00 ರಿಂದ 14.00 ಗಂಟೆಯವರೆಗೂ ನಡೆಸಲಾಗಿರುತ್ತದೆ. ಇದರ ಬಾಬ್ತು ಅಕ್ಕಸಾಲಿಗ ರವರು ದೃಢೀಕೃತ ಪ್ರತಿಯನ್ನು ನೀಡಿರುತ್ತಾರೆ. ದಿ.29.05.2024 ರಂದು ಪಿ.ಡಿ.ಒ ಹಳೇ ಮೂಡಿಗೆರೆಯವರಿಗೆ ಕೃತ್ಯ ನಡೆದ ಸ್ಥಳದ ದಾಖಲಾತಿಯನ್ನು ಕೋರಿಕೊಂಡಿರುತ್ತೇನೆ. ದಿ.30.05.2024 ರಂದು ಸದರಿಯವರು ದಾಖಲಾತಿಯನ್ನು ನೀಡಿರುತ್ತಾರೆ. ದಿ.26.06.2024 ರಂದು ಚಾಸಾ-1 ರವರ ಹಣ ಮತ್ತು ಚಿನ್ನವನ್ನು ಬಿಡುಗಡೆಯ ಕುರಿತು ಆದೇಶವನ್ನು ಹಾಜರುಪಡಿಸಿದ್ದು, ಸದರಿ ವಸ್ತುಗಳನ್ನು ಚಾಸಾ-1 ರವರಿಗೆ ಬಿಡುಗಡೆ ಮಾಡಿರುತ್ತೇನೆ. ಪ್ರಸ್ತುತ ಪ್ರಕರಣದಲ್ಲಿ ತನಿಖೆಯು ಪೂರ್ಣಗೊಂಡಿದ್ದು, ದಿ.26.06.2024 ರಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-3, 8 ಮತ್ತು 9 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3(ಬಿ), 8(ಬಿ) ಮತ್ತು 9(ಬಿ) ಎಂದು ಗುರುತಿಸಲಾಯಿತು. ನಿಪಿ-4 ಮತ್ತು 5 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ನಿಪಿ-10 ಮತ್ತು 11 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ನಿಪಿ-16 ಮತ್ತು 13 ರಲ್ಲಿರುವ ವಸ್ತುವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ದಿ.29.05.2026 ರಂದು ಚಾಸಾ-6 ರವರಿಗೆ ನೀಡಿದ ಮನವಿ ಪತ್ರ ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿ ಪತ್ರವನ್ನು ನಿಪಿ-17 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ದಿ.29.05.2024 ರಂದು ಚಾಸಾ-6 ರವರು ಪೋಲಿಸರಿಗೆ ನೀಡಿರುವ ಮನವಿ ಪತ್ರವನ್ನು ನಿಪಿ-18 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ದಿ.28.05.2024 ರಂದು ಬರೆದ ಮಹಜರ್ ಪ್ರತಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಪ್ರತಿಯನ್ನು ನಿಪಿ-19 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ತೆಗೆದ ಫೋಟೋಗಳನ್ನು ನಿಪಿ-20 ರಿಂದ 27 ಎಂದು ಗುರುತಿಸಲಾಯಿತು. ದಿ.28.05.2024 ರಂದು ಬರೆದ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ನಿಪಿ-28 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಬೀಗ ಮತ್ತು

ಕಬ್ಬಿಣದ ರಾಡನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಎಂ.ಒ.1 ಮತ್ತು 2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದ:</u>**

ನಾನು ಚಾಸಾ-14 ರವರಿಂದ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-1 ರವರು ಸ್ಥಳವನ್ನು ತೋರಿಸಿದ ಮೇರೆಗೆ ಸ್ಥಳ ಮಹಜರ್ ನ್ನು ಮಾಡಿರುತ್ತೇನೆ ಮತ್ತು ಸದರಿ ಸಮಯದಲ್ಲಿ ಒಂದು ಬೀಗವನ್ನು ವಶಪಡಿಸಿಕೊಂಡು ಒಂದು ಫೋಟೋವನ್ನು ತೆಗೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಶರತ್ ಗೌಡ ರವರ ಕೂಲಿ ಲೈನ್ ಮನೆಯ ಬಳಿ ಹಣ ಮತ್ತು ಒಂದು ಚಿನ್ನದ ಓಲೆಯನ್ನು ವಶಪಡಿಸಿಕೊಂಡು ಒಂದು ಫೋಟೋವನ್ನು ತೆಗೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಶಪಡಿಸಿಕೊಂಡಂತಹ ಚಿನ್ನದ ವಸ್ತುಗಳನ್ನು ಚಾಸಾ-6 ರವರು ಮುಖೇನ ಪರೀಕ್ಷೆಗೆ ಒಳಪಡಿಸಿ ಮಹಜರ್ ಕ್ರಮ ಜರುಗಿಸಿ ಫೋಟೋವನ್ನು ತೆಗೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ಕುರಿತು ದಾಖಲಾತಿಗಳನ್ನು ಕೋರಿ ಪಿ.ಡಿ.ಒ ರವರಿಗೆ ಮನವಿಯನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿಯವರಿಂದ ಕೃತ್ಯ ನಡೆದ ಸ್ಥಳದ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಕ್ಕೋಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಾನು ಈ ದಿನ ಗುರುತಿಸಿರುವ ದಾಖಾಲತಿಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಎಂ.ಒ.1 ಮತ್ತು 2 ನ್ನು ಈ ಪ್ರಕರಣಕ್ಕಾಗಿ ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.